

بسم اللهِ الرّحمٰنِ الرّحيم

## ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅವರ ಜುಮುಅ ಖುತುಬದ ಸಾರಾಂಶ – 28.02.2014

# ಮುಸ್ಲಿಹ್ ಮೌಊದ್: ಇಂಗ್ಲೇಂಡಿನ ಒಂದು ಸರ್ವ ಧರ್ಮ ಸಮ್ಮೇಳನದಲ್ಲಿ

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹುಝೂರ್ ಹೀಗೆ ಹೇಳಿದರು:–

ಕಳೆದ ವಾರದ ಜುಮುಅ ಖುತುಬದಲ್ಲಿ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬಗ್ಗೆ ನುಡಿದ ಭವಿಷ್ಯವಾಣಿಯಲ್ಲಿ "ಅವರು ಆಂತರಿಕ ಮತ್ತು ಬಾಹ್ಯ ಜ್ಞಾನದಿಂದ ಸಂಪನ್ನರಾಗಿರುವರು" ಎಂಬ ಭವಿಷ್ಯವಾಣಿಯ ಅಂಶದ ಬಗ್ಗೆ ಪ್ರಸ್ತಾಪಿಸಿದ್ದೆನು. ಅವರ ಅರಿವು, ಜ್ಞಾನ ವೈಭವ ಮತ್ತು ಅವರು ಪವಿತ್ರ ಖುರ್‌ಆನ್ ಬಗ್ಗೆ ಮಾಡಿದ ವ್ಯಾಖ್ಯಾನ ಜಮಾಅತಿಗೆ ಸೇರಿರದವರಲ್ಲೂ ಪ್ರಭಾವ ಬೀರಿತ್ತು. ಅದರ ಬಗ್ಗೆ ಅವರು ಸ್ಪಷ್ಟವಾಗಿ ಹೇಳಿದ್ದರು. ಅವರು ಮಾಡಿದ ಕೆಲಸ ಎಷ್ಟು ವಿಶಾಲವಾಗಿದೆ ಎಂದರೆ ಪ್ರಾಯಶಃ ವರ್ಷಗಳಷ್ಟು ಕಾಲ ಪ್ರಸ್ತಾಪಿಸಿದರೂ ಅವುಗಳನ್ನೆಲ್ಲಾ ವಿವರಿಸುವುದು ಅಸಾಧ್ಯವೇ ಆಗಿವೆ. ಕಳೆದ ಜುಮುಅ ಖುತುಬದಲ್ಲಿ ಒಂದು ಪ್ರಧಾನ ಸಂಗತಿ ನಾನು ವಿವರಿಸ ಬಯಸಿದ್ದೆ. ಆದರೆ ಸಮಯದ ಅಭಾವದ ಕಾರಣ ವಿವರಿಸಲಾಗಿರಲಿಲ್ಲ. ಇಂದು ಅದರ ಬಗ್ಗೆ ವಿವರಿಸುವೆನು. 90 ವರ್ಷ ಹಿಂದಿನ, ಲಂಡನ್ ನಗರಕ್ಕೆ ಸಂಬಂಧ ಪಟ್ಟ ವಿಷಯವಾಗಿದೆ ನಾನು ಹೇಳುವುದು. ಸೆಪ್ಟಂಬರ್ 1924ರಲ್ಲಿ ಲಂಡನ್‌ನಲ್ಲಿ ಒಂದು ಧಾರ್ಮಿಕ ಸಮ್ಮೇಳನ ನಡೆದ ಬಗ್ಗೆ ನಿಮ್ಮಲ್ಲಿ ಹಲವರಿಗೆ ತಿಳಿದಿರಬಹುದು. ಆ ಸಮ್ಮೇಳನಕ್ಕೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಸ್ವತಃ ಹೋಗಿದ್ದರು. ಆಗ ಅವರ ಜೊತೆ ಹನ್ನೆರಡು ಜನ ಸಂಗಡಿಗರಿದ್ದರು. ಹಝ್ರತ್ ಖಲೀಫತುಲ್ ಮಸೀಹರು ತನ್ನ ಖರ್ಚು ತಾನೇ ಸ್ವತಃ ವಹಿಸಿದರು. ಉಳಿದವರಿಗೋಸ್ಕರ ಸಾಲ ಪಡೆಯ ಬೇಕಾಗಿ ಬಂದಿತ್ತು. ಅದು ಖಲೀಫತುಲ್ ಮಸೀಹರ ಪ್ರಥಮ ಯುರೋಪ್ ಯಾತ್ರೆಯಾಗಿತ್ತು. ಯುರೋಪಿನೊಂದಿಗೆ ಅವರು ಕೆಲವು ಅರಬ್ ದೇಶಗಳಿಗೂ ಭೇಟಿ ಇತ್ತರು. ಶಾಮ್, ಈಜಿಪ್ಟ್, ಪಾಲೆಸ್ತೀನ್ ಮೊದಲಾದ ಅರಬ್ ದೇಶಗಳಿಗೂ ಅವರು ಹೋದರು. ಈ ಅರಬ್ ದೇಶಗಳಿಗೆ ಖಲೀಫತುಲ್ ಮಸೀಹ್ ಸಾನಿ ಹೊರತು ಬೇರೆ ಯಾವ ಖಲೀಫರೂ ಭೇಟಿ ನೀಡಿಲ್ಲ. ಅದರ ನಂತರ ಆ ದೇಶಗಳ ಪರಿಸ್ಥಿತಿ ಬಿಗಡಾಯಿಸುತ್ತಾ ಬಂತು. ಹಾಗೂ ಅಲ್ಲಿಗೆ ಭೇಟಿ ನೀಡುವುದು ನಿರ್ಬಂಧಿಸಲ್ಪಟ್ಟಿತು. ಹಡಗಿನಲ್ಲಿ ಪ್ರಯಾಣ ಮಾಡುವಾಗ ಡೆಕ್‌ನಲ್ಲಿ ಪ್ರಥಮ ಮತ್ತು ದ್ವಿತೀಯ ದರ್ಜೆ ಮಧ್ಯೆ ಇರುವ ಖಾಲಿ ಸ್ಥಳದಲ್ಲಿ ಖಲೀಫತುಲ್ ಮಸೀಹ್ ತನ್ನ ಸಂಗಡಿಗರೊಂದಿಗೆ ನಮಾಝ್ ಮಾಡಿ ಕುಳಿತಿದ್ದಾಗ ಅದನ್ನು ಕಂಡ ಆ ಹಡಗಿನ ಡಾಕ್ಟರ್, ಇಟೆಲಿಯ ನಾಗರಿಕ, ಅವರ ಬಾಯಿಯಿಂದ ಈ ರೀತಿಯ ಮಾತು ಹೊರಟಿತು: JESUS CHRIST AND TWELVE DESCIPLES (ಯೇಸುಕ್ರಿಸ್ತರು ಮತ್ತು ಹನ್ನೆರಡು ಶಿಷ್ಯರು!). ಈ ಧಾರ್ಮಿಕ ಸಮ್ಮೇಳನ ವೆಂಬ್ಲೇ ಕಾನ್‌ಫರೆನ್ಸ್ ಎಂದು ಕರೆಯಲ್ಪಡುತ್ತದೆ. ಅದರ ಚಾರಿತ್ರಿಕ ಹಿನ್ನಲೆ ಮತ್ತು ಉದ್ದೇಶ ಲಕ್ಷ್ಯಗಳ ಬಗ್ಗೆ ಸಹ ವಿವರಿಸುವೆನು.

1924ರಲ್ಲಿ ಇಂಗ್ಲೇಂಡಿನ ವೆಂಬ್ಲೇಯಲ್ಲಿ ಒಂದು ಜಾಗತಿಕ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಆ ಕಾಲದ ಒಬ್ಬ ಸೋಶಿಯಲಿಸ್ಟ್ ನಾಯಕ ವಿಲಿಯಂ ಲಾಫ್‌ಟಸ್ ಹೇರ್ ಎಂಬವರು ಸುಪ್ರಸಿದ್ಧವಾದ ಈ ವಸ್ತು ಪ್ರದರ್ಶನದ ಜೊತೆ ಒಂದು ಧಾರ್ಮಿಕ ಸಮ್ಮೇಳನವನ್ನು ಸಹ ನಡೆಸುವ ಪ್ರಸ್ತಾಪವನ್ನು ಮುಂದಿಟ್ಟರು. ಹಾಗೆ ಅದಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಅಧೀನದಲ್ಲಿದ್ದ ದೇಶಗಳ ವಿಭಿನ್ನ ಧಾರ್ಮಿಕ ನಾಯಕರಿಗೆ ಆಮಂತ್ರಣ ನೀಡಲಾಗಿತ್ತು. ಅವರು ಬಂದು ತಮ್ಮ ತಮ್ಮ ಧರ್ಮ ತತ್ವಗಳನ್ನು ವಿವರಿಸಲು ಕೋರಲಾಗಿತ್ತು. ಲಂಡನ್‌ನಲ್ಲಿರುವ ದಿ 'ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್' ನೇತೃತ್ವದಲ್ಲಿ ಈ ಸಮ್ಮೇಳನ ನಡೆಸಬೇಕೆಂದು ಆಗಿನ ಕಾಲದ ಪೌರಸ್ತ್ಯ ಶಾಸ್ತ್ರಜ್ಞರು ಸಲಹೆ ನೀಡಿದರು. ಅದಕ್ಕೋಸ್ಕರ ಒಂದು ಸಮಿತಿ ರಚಿಸಲಾಯಿತು. ಸಮ್ಮೇಳನ ಲಂಡನ್‌ನ ಇಂಪೀರಿಯಲ್ ಇನ್‌ಸ್ಟಿಟ್ಯೂಟಿನಲ್ಲಿ ಜರಗಿಸಬೇಕು ಎಂದೂ 1924ರ ಸೆಪ್ಟಂಬರ್ 22ರಿಂದ ಅಕ್ಟೋಬರ್ 3ರ ತನಕ ಈ ಸಮ್ಮೇಳನ ನಡೆಸಬೇಕೆಂದೂ ನಿಶ್ಚಯಿಸಲಾಯಿತು. ಹಿಂಧೂ ಧರ್ಮ, ಇಸ್ಲಾಮ್ ಧರ್ಮ, ಬೌದ್ಧ ಧರ್ಮ, ಪಾರಸೀ ಧರ್ಮ, ಚೀನೀ ಧರ್ಮ, ಸಿಖ್ ಧರ್ಮ, ಸೂಫಿ ಪಂಥ, ಬ್ರಹ್ಮ ಸಮಾಜ, ಆರ್ಯ ಸಮಾಜ, ಕನ್‌ಫ್ಯೂಶಿಯಸ್ ಧರ್ಮ ಮೊದಲಾದವುಗಳ ಭಾಷಣಕಾರರನ್ನು ಆಯ್ಕೆ ಮಾಡಿ ಆಮಂತ್ರಿಸಲಾಯಿತು.

ಆ ಕಾಲದಲ್ಲಿ ಹಝ್ರತ್ ಮೌಲವಿ ಅಬ್ದುರ್ರಹೀಮ್ ಸಾಹೇಬ್ ದರ್ದ್ ರಝಿಯಲ್ಲಾಹು ಅನ್‌ಹು 1923ರಲ್ಲೇ ಮುಬಲ್ಲಿಗರಾಗಿ ಲಂಡನಿಗೆ ಆಗಮಿಸಿದ್ದರು. ಅವರಿಗೆ ಈ ಸಮ್ಮೇಳನದ ಬಗ್ಗೆ ವಿವರ ತಿಳಿದಿರಲಿಲ್ಲ. ನಂತರ ಅವರಿಗೆ ಈ ವಿಷಯ ತಿಳಿದಾಗ ಕೂಡಲೇ ಅವರು ಇಸ್ಲಾಮ್ ಬಗ್ಗೆ ಮಾತನಾಡಲು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರಿಗೆ ಆಮಂತ್ರಣ ನೀಡಬೇಕೆಂದು ಕಾರ್ಯಕಾರಿ ಸಮಿತಿಯೊಂದಿಗೆ ಅಪೇಕ್ಷಿಸಿದರು. ಆಗ ಡಾಕ್ಟರ್ ಅರ್‌ನೋಲ್ಡ್, ಪ್ರೊಫೆಸರ್ ಮಾರ್ಗೋಲಿಯಸ್ ಹಾಗೂ ಸಮಿತಿಯ ಇತರ ಸದಸ್ಯರು ಬಹಳ ಸಂತೋಷದಿಂದ ಇದಕ್ಕೆ ಸಮ್ಮತಿ ಸೂಚಿಸಿ ಹಝ್ರತ್ ಖಲೀಫತುಲ್ ಮಸೀಹರನ್ನು ಆಮಂತ್ರಿಸಿದರು. ಹಾಗೆ, ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಲಂಡನಿಗೆ ಹೊರಟರು. ಸೆಪ್ಟಂಬರ್ 23ರಂದು ಈ ಸಮ್ಮೇಳನ ಆರಂಭವಾಯಿತು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ಪ್ರಬಂಧ ಅದ್ವಿತೀಯವಾಗಿತ್ತು. ಈ ಪ್ರಬಂಧ ವಾಚನೆಯ ಫಲವಾಗಿ ಇಸ್ಲಾಮ್ ಮತ್ತು ಅಹ್ಮದಿಯತ್ತಿನ ಬಗ್ಗೆ ತುಂಬಾ ಪ್ರಚಾರವಾಯಿತು. ಯುರೋಪಿಗೆ ಇಸ್ಲಾಮಿನ ಸಂದೇಶ ಸರಿಯಾದ ರೀತಿಯಲ್ಲಿ ತಲಪಿಸಲಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನು ಲಂಡನ್‌ನಲ್ಲಿ ಭಾಷಣ ಮಾಡುತ್ತಾ ಇರುವುದಾಗಿ ಕಂಡ ಒಂದು ದಿವ್ಯ ಸ್ವಪ್ನ ಈ ಮೂಲಕ ಈಡೇರಿತು. ಸಮ್ಮೇಳನದ ಅಧ್ಯಕ್ಷ ಸರ್ ತಿಯೋಡರ್ ಮಾರಿಸನ್ ಆಗಿದ್ದರು. ಮೊದಲು ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರನ್ನು ಸಭಿಕರಿಗೆ ಪರಿಚಯಿಸಿ ಕೊಟ್ಟರು. ಅನಂತರ ಬಹಳ ವಿನಯದಿಂದ ಖಲೀಫರೊಡನೆ ತಮ್ಮ ಭಾಷಣವನ್ನು ಪ್ರಸ್ತುತ ಪಡಿಸುವಂತೆ ವಿನಂತಿಸಿದರು. ಆಗ ತನ್ನ ಸಂಗಡಿಗರೊಂದಿಗೆ ವೇದಿಕೆಯಲ್ಲಿ ಕುಳಿತಿದ್ದ ಹಝ್ರತ್ ಖಲೀಫತುಲ್

ಮಸೀಹ್ ಸಾನಿಯವರು ಎದ್ದು ನಿಂತು ಇಂಗ್ಲಿಷ್‌ನಲ್ಲಿ ಸಂಕ್ಷಿಪ್ತ ಭಾಷಣ ಮಾಡಿದರು. ಅವರು ಹೇಳಿದರು: "ಸಹೋದರಿಯರೇ, ಸಹೋದರರೇ, ಎಲ್ಲದಕ್ಕಿಂತಲೂ ಮೊದಲು ನಾನು ಸೃಷ್ಟಿಕರ್ತನಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಅವನು ಸಮ್ಮೇಳನದ ಸಂಘಾಟಕರ ಹೃದಯಗಳಲ್ಲಿ ಹೀಗೆ ಯೋಚನೆ ಸ್ಫುರಿಸಿದನು. ಜನರು ಧರ್ಮದ ಬಗ್ಗೆ ಚಿಂತಿಸಲಿ. ವಿವಿಧ ಧರ್ಮಗಳ ಬಗ್ಗೆ ಭಾಷಣಗಳನ್ನು ಆಲಿಸಿ ಯಾವ ಧರ್ಮವನ್ನು ಸ್ವೀಕರಿಸಬೇಕೆಂದು ಯೋಚಿಸುವಂತಾಗಲಿ. ನನ್ನ ಪ್ರಬಂಧವನ್ನು ನನ್ನ ಶಿಷ್ಯರಾದ ಚೌಧರಿ ಝುಫರುಲ್ಲಾ ಖಾನ್, ಬಾರ್ ಎಟ್‌ಲಾ ಓದಬೇಕೆಂದು ಅವರನ್ನು ಅಪೇಕ್ಷಿಸುತೇನೆ."

ಆ ಭಾಷಣ ಓದಲು ಹೆಚ್ಚು ಕಮ್ಮಿ ಒಂದು ಗಂಟೆ ಸಮಯ ಬೇಕಾಯಿತು. ಆ ಭಾಷಣವನ್ನು ಭವ್ಯ ಶೈಲಿಯಲ್ಲಿ ಓದಲಾಯಿತು. ಆ ಭಾಷಣ ಆಲಿಸಿ ಸಭಿಕರಲ್ಲಿ ಒಂದು ರೀತಿಯ ಅದ್ಭುತ ಪ್ರಭಾವ ಉಂಟಾಯಿತು. ಅಲ್ಲಿದ್ದವರೆಲ್ಲಾ ತಾವೆಲ್ಲಾ ಅಹ್ಮದಿಯರೋ ಎಂಬಂತೆ ತನ್ಮಯರಾಗಿ ಭಾಷಣ ಆಲಿಸಿದರು. ಎಲ್ಲಾ ಜನರು ಭಾಷಣ ಮುಗಿಯುವವರೆಗೂ ಮೋಹ ಪರವಶರಾಗಿ ಕುಳಿತಿದ್ದರು. ಆ ಭಾಷಣದಲ್ಲಿ ಇಸ್ಲಾಮ್ ಬಗ್ಗೆ ಅವರಿಗೆ ಹೊಸದಾಗಿ ತೋರುವ ಅಂಶವನ್ನು ಆಲಿಸುವಾಗ ಅವರು ಸಂತೋಷದಿಂದ ಎದ್ದೇಳುತ್ತಿದ್ದರು. ಗುಲಾಮಗಿರಿ, ಬಡ್ಡಿ ವ್ಯವಹಾರ, ಬಹುಭಾರ್ಯತ್ವ, ಮೊದಲಾದವುಗಳನ್ನು ಅತ್ಯಂತ ಸ್ಪಷ್ಟವಾಗಿ ವಿವರಿಸಲಾಗಿತ್ತು. ಪುರುಷರು ಮಾತ್ರವಲ್ಲ ಮಹಿಳೆಯರು ಸಹ ಈ ವಿಷಯಗಳ ಬಗ್ಗೆ ಆಸಕ್ತಿಯಿಂದ ಆಲಿಸಿದರು. ಒಂದು ಗಂಟೆಯ ನಂತರ ಭಾಷಣ ಮುಗಿಸಿದಾಗ ಜನರು ತುಂಬಾ ಉತ್ಸಾಹಭರಿತರಾಗಿ ಬಹಳಕಾಲ ಚಪ್ಪಾಳೆ ಬಾರಿಸಿದರು. ಅಧ್ಯಕ್ಷರು ಚಪ್ಪಾಳೆ ಮುಗಿಯುವ ತನಕ ಹಲವು ನಿಮಿಷ ಕಾಯಬೇಕಾಯಿತು. ಈ ಪ್ರಬಂಧ "ಅನ್‌ವಾರುಲ್ ಉಲೂಮ್"ನ ಎಂಟನೇ ಸಂಪುಟದಲ್ಲಿ ಮುದ್ರಿತವಾಗಿದೆ.

ಸಮ್ಮೇಳನದ ಅಧ್ಯಕ್ಷ ಸರ್ ತಿಯೋಡರ್ ಮಾರಿಸನ್ ಹೇಳಿದರು: ಇಸ್ಲಾಮ್‌ನಲ್ಲಿ ಅಹ್ಮದಿಯಾ ಜಮಾಅತ್ ಮತ್ತು ಇಂತಹ ಇತರ ಸಂಘಟನೆಗಳು ಪ್ರಾರಂಭವಾದುದು ಇಸ್ಲಾಮ್ ಒಂದು ಜೀವಂತ ಧರ್ಮವೆಂದು ಸೂಚಿಸುತ್ತದೆ. ಮೂಸಾ ಪ್ರವಾದಿಯ ಶೃಂಖಲೆಯಲ್ಲಿ ಈಸಾ ಪ್ರವಾದಿಯ ಆಗಮನದ ಹಾಗೆ ಇಸ್ಲಾಮ್‌ನಲ್ಲಿ ಪ್ರಾರಂಭವಾದ ಈ ಅಹ್ಮದಿಯಾ ಸಂಘಟನೆ ಇಸ್ಲಾಮ್ ಧರ್ಮದ ಆವಶ್ಯಕ ಮತ್ತು ಸಹಜ ಪುನಶ್ಚೇತನಕ್ಕೆ ಸಹಾಯಕವಾಗಿದೆ. ಇದರ ಉದ್ದೇಶ ಹೊಸ ನಿಯಮ ಸಂಹಿತೆ ರೂಪಿಸುವುದಲ್ಲ. ಇಸ್ಲಾಮ್ ಧರ್ಮದ ವಾಸ್ತವಿಕ ನೈಜ ತತ್ವಗಳ ಪ್ರಚಾರ ಮಾತ್ರವಾಗಿದೆ ಅದರ ಉದ್ದೇಶ.

ಸಭಾ ಅಧ್ಯಕ್ಷರು ಮತ್ತೂ ಹೇಳಿದರು: ನಾನು ಈ ಭಾಷಣದ ಬಗ್ಗೆ ಹೆಚ್ಚಿಗೇನೂ ಹೇಳಬೇಕಾದ ಆವಶ್ಯಕತೆಯಿಲ್ಲ. ಈ ವಿಷಯದ ಸೌಂದರ್ಯವನ್ನು ಈ ಭಾಷಣವೇ ಮಾಡಿಕೊಟ್ಟಿದೆ. ನಾನು ಎಲ್ಲ ಸಭಿಕರ ಪರವಾಗಿ ಈ ಭಾಷಣದ ಸೌಂದರ್ಯ, ಅದರಲ್ಲಿ ಪ್ರತಿಪಾದಿಸಲಾದ ವಿಷಯಗಳ ವ್ಯವಸ್ಥೆ, ಅದರಲ್ಲಿ ಅಡಕವಾದ ಉನ್ನತ ಚಿಂತನೆಗಳು, ಸಾಕ್ಷ್ಯಾಧಾರಗಳನ್ನು ನೀಡುವ ಉನ್ನತ ಮಟ್ಟದ ಕ್ರಮಬದ್ಧತೆ, ಇವುಗಳಿಗೋಸ್ಕರ ಹಝ್ರತ್ ಖಲೀಫತುಲ್ ಮಸೀಹರಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಇಲ್ಲಿ ನೆರೆದಿರುವ ಶ್ರೋತೃಗಳ ಮುಖಭಾವಗಳು ನಾನು ಹೇಳುವುದನ್ನು ಅಂಗೀಕರಿಸುತ್ತವೆ. ನಾನು ಅವರ ಪರವಾಗಿ ಕೃತಜ್ಞತೆ ಅರ್ಪಿಸುವುದನ್ನು ಅವರು ಸರಿಯೆಂದು ಗಣಿಸುತ್ತಾರೆಂದು ನನಗೆ ಭರವಸೆ ಇದೆ. ನಾನು ಅವರ ವಕ್ತಾರನಾಗಿದ್ದೇನೆಂದು ಅವರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಅನಂತರ ಅವರು ಹಝ್ರತ್ ಖಲೀಫತುಲ್ ಮಸೀಹ್‌ರನ್ನು ನೇರವಾಗಿ ಸಂಬೋಧಿಸಿ ಹೇಳಿದರು: ನಿಮ್ಮ ಭಾಷಣದ ಯಶಸ್ವಿಗೋಸ್ಕರ ನಾನು ನಿಮಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ನೀವು ಪ್ರತಿಪಾದಿಸಿದ ವಿಷಯ ಅತ್ಯುತ್ತಮವಾಗಿತ್ತು. ನಿಮ್ಮ ಭಾಷಣ ಇಂದಿನ ಎಲ್ಲಾ ಭಾಷಣಗಳಿಗಿಂತ ಅತ್ಯುತ್ತಮವಾಗಿತ್ತು.

ಅನಂತರ ಸಹ ತಿಯೋಡರ್ ಮಾರಿಸನ್ ಬಹಳ ಹೊತ್ತು ನಿಂತುಕೊಂಡು ಭಾಷಣದ ಬಗ್ಗೆ ಹೊಗಳುತ್ತಾ ಇದ್ದರು. ಅನಂತರ ಫ್ರೀಚರ್ಚ್ ಸಂಸ್ಥೆಯ ಅಧ್ಯಕ್ಷ ಡಾಕ್ಟರ್ ವಾಲ್ಟರ್ ವಾಶ್ (ಅವರು ಪ್ರಸಿದ್ಧ ವಾಗ್ಮಿ ಆಗಿದ್ದರು) ತನ್ನ ಅಭಿಪ್ರಾಯವನ್ನು ಹೀಗೆ ಹೇಳಿದರು: "ನನಗೆ ಈ ಭಾಷಣವನ್ನು ಕೇಳಲು ಅವಕಾಶ ಲಭಿಸಿದ್ದು ನನ್ನ ಸೌಭಾಗ್ಯವೆಂದು ನಾನು ಭಾವಿಸುತ್ತೇನೆ." ಅನಂತರ ಓರ್ವ ಕಾನೂನು ತಜ್ಞ ಪ್ರೊಫೆಸರ್ ಈ ರೀತಿ ಹೇಳಿದರು: "ನಾನು ಭಾಷಣ ಆಲಿಸುತ್ತಿದ್ದಾಗ ಹೀಗೆ ಯೋಚಿಸಿದೆ. ಈ ದಿನ ಒಂದು ಹೊಸ ಕಾಲಘಟ್ಟದ ಪ್ರಾರಂಭವಾಗಿದೆ. ನೀವು ಸಾವಿರಾರು ರೂಪಾಯಿ ಖರ್ಚು ಮಾಡಿದರೂ ಇಂತಹ ಜಯವನ್ನು ಕಾಣಲಾರಿರಿ."

ಒಬ್ಬ ಪಾದರಿ ಹೀಗೆ ಹೇಳಿದರು: "ಮೂರು ವರ್ಷಗಳ ಹಿಂದೆ ನಾನೊಂದು ಸ್ವಪ್ನ ಕಂಡೆನು. ಯೇಸುಮಸೀಹಾ ಹದಿಮೂರು ಶಿಷ್ಯರೊಂದಿಗೆ ಇಲ್ಲಿಗೆ ಆಗಮಿಸಿದರೆಂದು. ನನ್ನ ಈ ಸ್ವಪ್ನ ಇಂದು ಈಡೇರಿದೆ."

ನಾನು ಹಡಗಿನಲ್ಲಿದ್ದ ಹನ್ನೆರಡು ಶಿಷ್ಯರ ಬಗ್ಗೆ ಮೊದಲು ಹೇಳಿದ್ದೆ. ಇಲ್ಲಿ ಸಮ್ಮೇಳನದಲ್ಲಿ ಹದಿಮೂರನೆಯ ಶಿಷ್ಯ ಚೌಧರಿ ಝುಫರುಲ್ಲಾ ಖಾನ್ ಸಾಹೇಬ್ ಆಗಿದ್ದಾರೆ. ಈ ರೀತಿ ಹದಿಮೂರು ಶಿಷ್ಯರಾದರು.

ಸಮ್ಮೇಳನದ ಸೆಕ್ರಟರಿ ಮಿಸ್ಟರ್ ಶಾರ್‌ಪಲ್‌ಝ್ ಹೀಗೆ ಹೇಳಿದರು: "ಜನರು ಈ ಭಾಷಣವನ್ನು ಬಹಳ ಹೊಗಳುತ್ತಾರೆ. ಒಬ್ಬರು ಹೇಳಿದರು– ಹಝ್ರತ್ ಖಲೀಫರು ಈ ಕಾಲದ ಲೂಥರ್ ಆಗಿದ್ದಾರೆ ಎಂದು. ಕೆಲವರು ಹೇಳಿದರು– ಅವರ ಹೃದಯದಲ್ಲಿ ಒಂದು ಅಗ್ನಿ ಇದೆ ಎಂದು. ಒಬ್ಬರು ಹೇಳಿದರು– ಎಲ್ಲಾ ಪ್ರಬಂಧಗಳಿಗಿಂತಲೂ ಈ ಪ್ರಬಂಧ ಬಹಳ ಉತ್ತಮವಾಗಿದೆ ಎಂದು."

ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಒಬ್ಬ ಜರ್ಮನ್ ಪ್ರೊಫೆಸರ್ ಮುಂದೆ ಬಂದು ಹಝ್ರತ್ ಖಲೀಫತುಲ್ ಮಸೀಹರಿಗೆ ಧನ್ಯವಾದ ಅರ್ಪಿಸುತ್ತಾ ಹೇಳಿದರು:– "ಕೆಲವು ಗಣ್ಯ ಬ್ರಿಟಿಷ್ ಜನರು ನನ್ನ ಹತ್ತಿರ ಕುಳಿತು ಭಾಷಣ ಆಲಿಸಿ ಹೇಳುತ್ತಿದ್ದರು: ಇಂತಹ ಅಪೂರ್ವ ಚಿಂತನೆಗಳು ಪ್ರತಿದಿನ ಆಲಿಸಲು ಸಿಗುವಂತವುಗಳಲ್ಲ."

ಮಿಸ್ಟರ್ ಲೇನ್, ಇಂಡಿಯಾ ಆಫೀಸ್‌ನಲ್ಲಿ ಬಹಳ ದೊಡ್ಡ ಹುದ್ದೇದಾರರಾಗಿದ್ದರು. ಅವರು ಹೇಳಿದರು: ಹಝ್ರತ್ ಖಲೀಫರ ಭಾಷಣ ಎಲ್ಲದಕ್ಕಿಂತಲೂ ಶ್ರೇಷ್ಠ ಮತ್ತು ಉನ್ನತ ಮಟ್ಟದ್ದಾಗಿತ್ತು.

ಹಝ್ರತ್ ಭಾಯೀ ಅಬ್ದುರ್ರಹ್ಮಾನ್ ಸಾಹೇಬ್ (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯ) ಹೇಳುತ್ತಾರೆ:- ಒಬ್ಬ ಮಹನೀಯರು ಖಲೀಫರ ಸಮೀಪಕ್ಕೆ ಹೋಗಿ ಹೇಳಿದರು: ನಾನು ಹಿಂದೂಸ್ಥಾನದಲ್ಲಿ ಮೂವತ್ತು ವರ್ಷ ಕೆಲಸ ಮಾಡಿದೆ. ಮುಸ್ಲಿಮರ ಸ್ಥಿತಿಗತಿಗಳು ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದೆ. ನಾನು ಮತ ಪ್ರಚಾರಕನಾಗಿ ಕೆಲಸ ಮಾಡಿದೆ. ನೀವು ಎಷ್ಟು ಚೆನ್ನಾಗಿ, ಎಷ್ಟು ಸ್ಪಷ್ಟವಾಗಿ, ಸೂಕ್ಷ್ಮವಾಗಿ ವಿಷಯಗಳನ್ನು ವಿವರಿಸಿರುವಿರೆಂದರೆ ಇದರ ಮೊದಲು ಇಂತಹ ವಿವರಣೆ ನಾನು ಕೇಳಿಯೇ ಇರಲಿಲ್ಲ. ನಿಮ್ಮ ಭಾಷಣ ಕೇಳಿ ನನ್ನ ಚಿಂತನೆಗಳ ಮೇಲೆ, ನೀವು ನೀಡಿದ ಸಾಕ್ಷ್ಯಾಧಾರಗಳು ಮತ್ತು ನೀವು ವಿಷಯವನ್ನು ಕ್ರೋಢೀಕರಿಸಿದ ರೀತಿ ಬಹಳ ಪ್ರಭಾವ ಬೀರಿದುವು.

ಒಬ್ಬರು ಭಾಷಣ ಆಲಿಸಲು ಫ್ರಾನ್ಸಿನಿಂದ ಆಗಮಿಸಿದ್ದರು. ಅವರು ಹೇಳಿದರು: ಇಸ್ಲಾಮ್ ಧರ್ಮವೇ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠ ಎಂದು ನಾನು ಒಪ್ಪುತ್ತೇನೆ. ನೀವು ಎಷ್ಟು ಚೆನ್ನಾಗಿ ಎಷ್ಟು ಕ್ರಮಬದ್ಧವಾಗಿ ಇಸ್ಲಾಮ್ ಧರ್ಮವನ್ನು ವಿವರಿಸಿರುವಿರೆಂದರೆ ಅದನ್ನು ಬೇರೆ ಯಾವುದೇ ಧರ್ಮ ಎದುರಿಸಲು ಶಕ್ತವಾಗಲಾರದು. ನನ್ನ ಹೃದಯದ ಮೇಲೆ ಈ ಭಾಷಣದ ಪ್ರಭಾವ ತಳಸ್ಪರ್ಶಿಯಾಗಿದೆ.

ಅನೇಕ ಮಹಿಳೆಯರು ಸಹ ಭಾಷಣ ಆಲಿಸಲು ಬಂದಿದ್ದರು. ಅವರೆಲ್ಲರೂ ಈ ಭಾಷಣವನ್ನು ಬಹಳ ಹೊಗಳಿದರು. ಒಬ್ಬ ಮಹಿಳೆ ಹೇಳಿದರು: ನನ್ನೊಂದಿಗೆ ಕೆಲವರು ಹೇಳುತ್ತಿದ್ದರು: THERE IS A FIRE IN HIM (ಅವರಲ್ಲೊಂದು ಅಗ್ನಿ ಇದೆ) ಎಂದು.

ಮಿಸ್ ಕಾರ್ಟರ್ ಎಂಬ ದೇವನ ಅಸ್ತಿತ್ವವನ್ನು ನಂಬದ ನಾಸ್ತಿಕ ಮಹಿಳೆ ಹೇಳಿದಳು: IT WAS CHARMFUL (ಅದು ಮನಮೋಹಕ ಭಾಷಣವಾಗಿದೆ).

'ಅದು ಅತ್ಯಂತ ಉನ್ನತ ಶ್ರೇಣಿಯ ಚಿಂತನೆಗಳಾಗಿದ್ದವು', 'ಅದರಲ್ಲಿ ಹೊಸ ಸತ್ಯಾಂಶಗಳಿವೆ' ಎಂಬಿತ್ಯಾದಿ ಪ್ರಸಂಶೆಗಳನ್ನು ಅನೇಕರು ಮಾಡಿದ್ದರು.

ಬಹಾಯಿ ಧರ್ಮದ ಒಬ್ಬ ಮಹಿಳೆ ಭಾಷಣ ಆಲಿಸಿ ಹಝ್ರತ್ ಖಲೀಫತುಲ್ ಮಸೀಹ್ ಮತ್ತು ಶಿಷ್ಯರನ್ನು ಹಿಂಬಾಲಿಸುತ್ತಾ ಹೇಳಿದರು: "ನಾನು ಬಹಾಯಿ ನಂಬಿಕೆ ಹೊಂದಿದ್ದೆ. ಈ ದಿನದ ಭಾಷಣ ಕೇಳಿ ನನ್ನ ನಂಬಿಕೆ ಬದಲಾಗಿದೆ. ನಾನು ನಿಮ್ಮ ಇನ್ನೂ ಕೆಲವು ಭಾಷಣಗಳನ್ನು ಆಲಿಸಲು ಇಚ್ಛಿಸುತ್ತೇನೆ. ಇನ್ನು ಮುಂದೆ ಎಲ್ಲೆಲ್ಲಿ ನೀವು ಭಾಷಣ ಮಾಡಲಿರುವಿರಿ ಎಂದು ತಿಳಿಸಿರಿ. ನಾನು ನಿಶ್ಚಯವಾಗಿಯೂ ಅಲ್ಲಿಗೆ ಬರುವೆ."

ಒಬ್ಬ ಕ್ರೈಸ್ತ ಮಹಿಳೆ ತನ್ನ ಮಗಳೊಂದಿಗೆ ಹಝ್ರತ್ ಖಲೀಫತುಲ್ ಮಸೀಹರನ್ನು ಹಿಂಬಾಲಿಸುತ್ತಾ ಬಹಳ ವಿನಯಪೂರ್ವಕ ಹೀಗೆ ಹೇಳಿದರು: "ನನ್ನ ಮನೆಗೆ ಗುರುವಾರ ಚಾ ಸತ್ಕಾರಕ್ಕೆ ಬರಬೇಕು." ಹಝ್ರತ್ ಖಲೀಫತುಲ್ ಮಸೀಹರು ತನಗೆ ಸಮಯವಕಾಶ ಇಲ್ಲ ಎಂದು ಹೇಳಿದರು. ಆದರೆ ಆ ಮಹಿಳೆ ಬಹಳ ವಿನಯ ಪೂರ್ವಕ ಸ್ನೇಹದಿಂದ ಅಪೇಕ್ಷಿಸುತ್ತಾ ತನ್ನ ಬೇಡಿಕೆಯನ್ನು ಈಡೇರಿಸಿಕೊಂಡರು. ಅವರು ಹೇಳಿದರು: ನಿಮಗೆ ಬಿಡುವು ಇರುವಾಗ ಯಾವಾಗಲಾದರೂ ಬನ್ನಿರಿ, ಆದರೆ ಖಂಡಿತ ಬರಲೇ ಬೇಕು.

ಒಬ್ಬ ವ್ಯಕ್ತಿ ಹೀಗೆ ಹೇಳಿದರು: ನಿಮ್ಮ ಭಾಷಣದ ವಿಷಯ ದೇಶಭಕ್ತಿಗಿಂತ ಹೆಚ್ಚು ಪ್ರಿಯಕರವಾಗಿದೆ.

ಈ ಸಂಕ್ಷಿಪ್ತ ಭಾಷಣವೇ ಬಹಳ ಧೀರ್ಘವಾಗಿತ್ತು. ಸಮ್ಮೇಳನದಲ್ಲಿ ಓದಲಿಕ್ಕಾಗಿ ಮೊದಲು ತಯಾರಿಸಿದ ಮೂಲ ಭಾಷಣ ಬಹಳಷ್ಟು ಧೀರ್ಘವಾಗಿದ್ದ ಕಾರಣ ಅದನ್ನು ಅಲ್ಲಿ ಓದಿರಲಿಲ್ಲ. ಅಂತೂ ಈ ಎರಡೂ ಪ್ರಬಂಧಗಳು ಇಂಗ್ಲಿಷ್‌ನಲ್ಲಿ ಭಾಷಾಂತರಗೊಂಡಿವೆ. ಆ ಭಾಷಣಗಳಲ್ಲಿ ನೀಡಲಾದ ಅಂಕೆ ಸಂಖ್ಯೆಗಳು ಆ ಭಾಷಣದ ಕಾಲಘಟ್ಟದ್ದಾಗಿವೆ. ಆ ಪ್ರಬಂಧದಲ್ಲಿ ನೀಡಲಾದ ತಬ್ಲೀಗ್ ಕೇಂದ್ರಗಳ ಪಟ್ಟಿ, ಜಮಾಅತ್‌ಗಳ ಸಂಖ್ಯೆ ಆ ಕಾಲದ್ದಾಗಿವೆ. ಜಮಾಅತ್ ಚಟುವಟಿಕೆಗಳ ವಿವರಣೆ ಸಹ ಆ ಕಾಲಘಟ್ಟದ್ದಾಗಿದೆ. ಈಗ ಜಮಾಅತ್ ಬಹಳ ಮುಂದೆ ಸಾಗಿದೆ. ಆದರೆ ಆ ಪ್ರಬಂಧದಲ್ಲಿ ವಿವರಿಸಲಾದ ಇತರ ವಿಷಯಗಳು ಈಗ ಸಹ ಇರುವವುಗಳಾಗಿವೆ. ಇಂಗ್ಲಿಷ್ ಬಲ್ಲವರು ಮತ್ತು ನಮ್ಮ ಯುವ ಜನರು ಈ ಪ್ರಬಂಧವನ್ನು ಓದಬೇಕು. ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರಿಗೆ ಅಸಂಖ್ಯಾತ ಅನುಗ್ರಹಗಳನ್ನು ವರ್ಷಿಸಲಿ. ಅವರು ಪ್ರತಿಯೊಂದು ವಿಷಯದ ಬಗ್ಗೆ ಲೆಕ್ಕವಿಲ್ಲದಷ್ಟು ನಿಧಿನಿಕ್ಷೇಪಗಳನ್ನು ನಮಗಾಗಿ ಬಿಟ್ಟು ಹೋಗಿದ್ದಾರೆ. ಅದರ ಬಗ್ಗೆ ನನ್ನ ಕಳೆದ ವಾರದ ಖುತುಬದಲ್ಲಿ ವಿವರಿಸಿದ್ದೇನೆ. ಫಝ್ಲೇ ಉಮರ್ ಫೌಂಡೇಶನ್ ಶೀಘ್ರದಲ್ಲೇ ಈ ಜ್ಞಾನ ನಿಧಿಯನ್ನು ವಿವಿಧ ಭಾಷೆಗಳಲ್ಲಿ ಭಾಷಾಂತರಿಸಿ ಪ್ರಕಟಿಸಬೇಕು. ಸ್ವಲ್ಪಮಟ್ಟಿಗೆ ಪ್ರಯತ್ನ ನಡೆಯುತ್ತಿದೆ. ಆದರೆ ಅದು ಸಾಲದು. ಶೀಘ್ರಗತಿಯಲ್ಲಿ ಮುಂದುವರಿಯಬೇಕಾಗಿದೆ.

ಡೆನ್‌ಮಾರ್ಕ್ ದೇಶದ ಒಬ್ಬ ನಿಷ್ಠಾವಂತ ಅಹ್ಮದಿ ಕಮಾಲ್ ಕರ್ದ್ ಮೃತರಾಗಿದ್ದಾರೆ. ಅವರ ಜನಾಝ ಗಾಯಿಬ್ ನಮಾಝ್ ನಡೆಸುವೆನು.

--------------*****--------------

**Friday Sermon delivered by Hadrath Khaleefathul Masih Al Khamis**[(atba)]
at Masjid Baithul Futhuh, London on 28-02-2014

**Note:** Kannada Isha'at Team takes full responsibility for any errors or miscommunication in this Synopsis of the Friday Sermon

**Contact Address:** DARUSSALAM, Ahmadiyya Muslim Jama'at, Near Railway Level Crossing,
Behind Delta-West Building, Pandeshwer, Mangalore – 575 001

**Email**: khutuba.kannada@gmail.com